O.S .No. 345/2014
PW-1

ದಿನಾಂಕ: 02.12.2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ವಿ.ಕೆ. ವಕೀಲರಿಂದಃ</u>

ದಾವೆಯನ್ನು ಪ್ರತಿವಾದಿ 1 ರಿಂದ 3 ರವರ ಮೇಲೆ ಹೂಡಿರುತ್ತೇನೆ. 1 ನೇ ಪ್ರತಿವಾದಿ ನನ್ನ ಭಾವ ಮೈದ. ನೀವು ಹಾಗೂ 1 ನೇ ಪ್ರತಿವಾದಿ 40 ವರ್ಷಗಳ ಹಿಂದೆ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದೀರಿ ಎಂದರೆ ಸರಿಯಲ್ಲ. ನೀವು ಹಾಗೂ 1 ನೇ ಪ್ರತಿವಾದಿ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದರೂ, ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಒಟ್ಟು ಕುಟುಂಬದಲ್ಲಿದ್ದಾಗ ನಿಮಗೆ ಸರ್ಕಾರದಿಂದ ದಾವಾ ಆಸ್ತಿಯನ್ನು ಮಂಜೂರು ಮಾಡಲಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದಲ್ಲಿ ಇರಲಿಲ್ಲ ಎಂದು ಹೇಳುತ್ತಾರೆ. ಒಟ್ಟು ಕುಟುಂಬದಲ್ಲಿದ್ದಾಗ ಮಂಜೂರಾದ 4 ಎಕರೆ ಜಮೀನಿನಲ್ಲಿ ನೀವು ಹಾಗೂ 1 ನೇ ಪ್ರತಿವಾದಿ ಜಂಟಿಯಾಗಿ ಉಳುಮೆ ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ, 4 ಎಕರೆ ನಮ್ಮದೇ ಎಂದು ಹೇಳುತ್ತಾರೆ.

1 ನೇ ಪ್ರತಿವಾದಿ ಉಳುಮೆ ಮಾಡುತ್ತಿರುವ ಜಮೀನಿನ ಯಾವ ದಿಕ್ಕಿಗೆ ನಿಮ್ಮ ಜಮೀನು ಇದೆ ಎಂದರೆ ಸಾಕ್ಷಿ ಅವರ ಜಮೀನೇ ಇಲ್ಲ ಎಂದು ಹೇಳುತ್ತಾರೆ. ನಿಪಿ-1 ರಲ್ಲಿ ನಮೂದಿಸಿರುವಂತೆ 2 ಎಕರೆ 31 ಗುಂಟೆಗೆ ಹಾಗೂ 1 ಎಕರೆ 9 ಗುಂಟೆಗೆ ಪ್ರತ್ಯೇಕವಾಗಿ ಖಾತೆ ಇದೆ ಎಂದರೆ ಸರಿ. ಪ್ರತ್ಯೇಕವಾಗಿ ಯಾವ ಉದ್ದೇಶಕ್ಕಾಗಿ ಖಾತೆಯಾಯಿತು ಎಂದರೆ ಸಾಕ್ಷಿ ಕೈ ಬಿಟ್ಟಿದ್ದರಿಂದ 2 ಬಾರಿ ಖಾತೆಯಾಗಿದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ 2 ಎಕರೆ 30 ಗುಂಟೆ ನಿಮ್ಮ ಹೆಸರಿಗೆ ಖಾತೆಯಾಗಿದ್ದು, 1 ಎಕರೆ 13 ಗುಂಟೆ 1 ನೇ ಪ್ರತಿವಾದಿಯ ಹೆಸರಿಗೆ ಖಾತೆಯಿತ್ತು ಎಂದರೆ ಸಾಕ್ಷಿ ಅವರು ಲಂಚ ಕೊಟ್ಟು ಖಾತೆ ಮಾಡಿಸಿಕೊಂಡಿದ್ದರು, ಅದನ್ನು ಸರಿಪಡಿಸಿಕೊಂಡೆ ಎಂದು ಹೇಳುತ್ತಾರೆ. ನೀವು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದಾಗ 1 ನೇ ಪ್ರತಿವಾದಿ ಹೆಸರಿಗೆ 1 ಎಕರೆ 13 ಗುಂಟೆ ಜಮೀನನ್ನು ನೀವೇ ಖಾತೆ ಮಾಡಿಸಿದ್ದೀರಿ ಎಂದರೆ ಸರಿಯಲ್ಲ. ನೀವು ಒಟ್ಟು ಕುಟುಂಬದಲ್ಲಿ ವಾಸವಾಗಿದ್ದಾಗ, 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಿಸಿಕೊಟ್ಟಿದ್ದರೂ, 1 ನೇ ಪ್ರತಿವಾದಿಗೆ ಜಮೀನು ಬಿಟ್ಟು ಕೊಡಬೇಕಾಗುತ್ತದೆಂಬ

ಕಾರಣಕ್ಕಾಗಿ ಒಟ್ಟು ಕುಟುಂಬದಲ್ಲಿದ್ದಾಗ ಖಾತೆ ಮಾಡಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಎಂ.ಆರ್.11/2000-01 ರಂತೆ ನಿಮ್ಮ ಹೇಳಿಕೆಯ ಮೇರೆಗೆ 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಮಾಡಲಾಗಿತ್ತು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ಜಮಿನಿನಲ್ಲಿ 40 ತೆಂಗಿನ ಮರಗಳನ್ನು ಬೆಳೆಸಿರುತ್ತಾರೆಂದರೆ ಸಾಕ್ಷಿ ಅವು ನಮ್ಮವು, ಅವರ ಜಮೀನೇ ಇಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ತನ್ನ ಜಮೀನಿನಲ್ಲಿ 40 ವರ್ಷದಿಂದ ತೆಂಗಿನ ಮರಗಳನ್ನು ಹಾಕಿ, ಕೊಳವೆ ಬಾವಿಯನ್ನು ಸಹ ಕೊರೆಯಿಸಿರುತ್ತಾರೆಂದರೆ ಸಾಕ್ಷಿ ಅದು ನನ್ನದು ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ತೆಂಗಿನ ಮರಗಳನ್ನು ಹಾಗೂ ಅವರು ಕೊರೆಯಿಸಿದ್ದ ಕೊಳವೆ ಬಾವಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**( ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ, ಆಲಿಸಿ ಅನುಮತಿಸಲಾಯಿತು.)**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.